ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಯಲಹಂಕ ವಲಯ
ಸಹಾಯಕ ಕಾರ್ಯಪಾಲಕ ಅಭಿಯಂತರರು ಕಛೇರಿ, ಯಲಹಂಕ ಉಪ ವಿಭಾಗ
ವಾರ್ಡ್ ನಂ. 01 (ಕೆಂಪೇಗೌಡ) ವಾರ್ಡ್ ಕಮಿಟಿ ಸಭೆ.

ದಿನಾಂಕ: 07-11-2020 ರಂದು ಬೆಳ್ಳಿಗೆ 11.00 ಗಂಟೆಗೆ ವಾರ್ಡ್ ನಂ.01 ಕೆಂಪೇಗೌಡ ವಾರ್ಡ್ ಸಮಿತಿಯ ಮಾನ್ಯ ನೊಡೆಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಜೊತೆ ಯಲಹಂಕ ವಿಭಾಗ ಕಚೇರಿಯಲ್ಲಿರುವ ವಾರ್ಡ್. ಕಛೇರಿಯಲ್ಲಿ ನೆಡೆದ ವಾರ್ಡ್ ಕಮಟಿ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಷರಾ |
|---|---|---|---|
| 1 | ಶ್ರೀ.ರಜನಿಕಾಂತ್ ಮಲ್ಲಿ. ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ನೊಡೆಲ್ ಅಧಿಕಾರಿಗಳು. | ಶ್ರೀ. ಚಂದ್ರಪ್ಪ ವಿ. (ವಲಯ ಅರಣ್ಯಾದಿಕಾರಿಗಳು) | |
| | | ಶ್ರೀ.ಲಿಂಗರಾಜು (ಹಿ.ಆ.ಪ) | |
| | | ಶ್ರೀ.ಬಾಬು ರೆಡ್ಡಿ (ವಿದ್ಯುತ್) | |
| 2 | ಶ್ರೀ.ಮಲ್ಲಿನಾಥ್ ಮಲ್ಕಾಪುರ ಸಹಾಯಕ ಅಭಿಯಂತರರು ಹಾಗೂ ಸಮಿತಿ ಕಾರ್ಯದರ್ಶಿ | ಶ್ರೀ.ಶ್ರೀನಿವಾಸ (ಬ್ಯನಿ.ಗಾ) | |
| | | ಶ್ರೀ.ಮಲ್ಯಾದ್ರಿ (ತೋಟಗಾರಿಕೆ) | |
| | | ಶ್ರೀ.ವಿವೇಕ್. (ಕಿ.ಆ.ಪ) | |

ಶ್ರೀ. ಮಲ್ಲಿನಾಥ ಮಲ್ಕಾಪುರ ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು ವಾರ್ಡ್ ಸಮಿತಿ ರವರು ಸಭೆಗೆ ಹಾಜರಿದ್ದ ನೊಡೆಲ್ ಅಧಿಕಾರಿಗಳು ಹಾಗೂ ಬಾಗವಹಿಸಿದ್ದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ ಸಭೆ ಪ್ರಾರಂಭಿಸಲು ನೊಡೆಲ್ ಅಧಿಕಾರಿರವರನ್ನು ಕೋರಲಾಯಿತು ಮತ್ತು ಸಬೆಯಲ್ಲಿ ಚರ್ಚಿಸಬೇಕಾದ ವಿಷಯಗಳ ಬಗ್ಗೆ ತಿಳಿಸಲಾಯಿತು.

ಶ್ರೀ ರಜನಿಕಾಂತ್ ಮಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಮಿತಿಯ ನೊಡೆಲ್ ಅಧಿಕಾರಿಯವರು ಸಬೆಯನ್ನು ಪ್ರಾರಂಭಿಸಿದರು.

1. ಮೊದಲನೇದಾಗಿ ವಾರ್ಡ್ ನಂ -01ರ ವ್ಯಾಪ್ತಿಯಲ್ಲಿ ಈ ಹಿಂದಿನ ಸಭೆಯಲ್ಲಿ ದಿನಾಂಕ 17-10-2020 ರ ಸಭೆಯಲ್ಲಿ ನಡೆದ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

2. ಸುಮಾರು ಒಂದು ವಾರದಿಂದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯವರು ಕಾವೇರಿ ನೀರಿನ ಸಂಪರ್ಕ ಸ್ಥಗೀತಗೊಳಿಸಿರುವುದಾಗಿ ಹಾಗೂ ವಾಟರ್ ಟ್ಯಾಂಕರ್ ಮೂಲಕ ನೀರನ್ನು ಸರಬರಾಜು ಮಾಡುತ್ತಿರುವುದಿಲ್ಲ ಎಂದು ಹಾಗೂ ವಾಟರ್ ಬಿಲ್‌ಗೆ ಸಂಬಂದಿಸಿದಂತೆ ಕಾವೇರಿ ನೀರಿನ ಸಂಪರ್ಕ ಸ್ಥಗೀತಗೊಳಿಸುವ ಮುನ್ನ ಸಾರ್ವಜನಿಕರಿಗೆ ಆಟೋಗಳ ಮೂಲಕ ಪ್ರಚಾರ ಮಾಡಿಸಬೇಕೆಂದು ಸ್ಥಳೀಯರಾದ ಶ್ರೀ. ವೈ.ಪಿ. ಮುನಿರಾಜು, ಶ್ರೀ.ಶಂಕರಪ್ಪ ರವರು ಮನವಿ ಸಲ್ಲಿಸಿದರು.
(ಕ್ರಮ: ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ)

ಮು.ತಿ.ನೋ.,,,

3. ಸುರಬಿ ಬಡಾವಣೆಯಲ್ಲಿ ಅತಿ ಶೀಘ್ರವಾಗಿ ರಾಜಕಾಲುವೆ ಕಾಮಗಾರಿಯನ್ನು ಕೈಗೊಂಡು ನಿರ್ವಹಿಸಲು ಸ್ಥಳೀಯರಾದ ವಿನಾಯಕ ಮತ್ತು ಆಂಜಿನಪ್ಪ ರವರು ಹಿಂದಿನ ಸಭೆಯಲ್ಲಿ ಮನವಿ ಸಲ್ಲಿಸಿದ್ದು, ಇದರ ಬಗ್ಗೆ ಸ್ಥಳ ಪರಿಶೀಲನೆ ಮಾಡುವಂತೆ ಹಾಗೂ ತುರ್ತಾಗಿ ಕೆಲಸ ನಿರ್ವಹಿಸುವಂತೆ ಕೋರಿದರು.
(ಕ್ರಮ : ಬಿ.ಬಿ.ಎಂ.ಪಿ ಬೃಹತ್ ನೀರುಗಾಲುವೆ)

4. ಮಹೇಶ್ವರಿ ನಗರ ಬಿಸನಳ್ಳಿ ತೋಟ ಅಪೂರ್ವ ಹಾಸ್ಪಿಟಲ್ ಎದುರುಗಡೆ ಒಳಚರಂಡಿ ಸಂಪರ್ಕ, ಯು.ಜಿ.ಡಿ. ಕೊಳವೆ ಸಾಲು ಆಳವಡಿಸಿರುವುದಿಲ್ಲ. ಈ ಭಾಗದಲ್ಲಿ ಒಳಚರಂಡಿ ನೀರು ತುಂಬಿ ರಸ್ತೆಯ ಮೇಲೆ ಹರಿಯುತ್ತಿರುವುದಾಗಿ ಹಾಗೂ ಸ್ಥಳೀಯರು ಅವರ ಸ್ವಂತ ಖರ್ಚಿನಲ್ಲಿ ಒಳಚರಂಡಿ ಸ್ವಚ್ಛತೆ ಕಾರ್ಯ ಮಾಡುತ್ತಿರುವುದಾಗಿ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದು ಸ್ಥಳೀಯರು ಸಭೆಗೆ ದೂರನ್ನು ಸಲ್ಲಿಸಿದರು.
(ಕ್ರಮ: ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ)

5. ವಿನಾಯಕ ಬಡಾವಣೆ, ವಿಕಾಸ ಬಡಾವಣೆ ಮತ್ತು ಯಲಹಂಕ ಓಲ್ಡ್ ಟೌನ್ ಹಲವು ಭಾಗಗಳಲ್ಲಿ ಬೀದಿ ದೀಪಗಳು ನಿರ್ವಹಣೆ ಸರಿಯಾಗಿ ಮಾಡುತ್ತಿರುವುದಿಲ್ಲ ಎಂದು ಸಭೆಗೆ ದೂರನ್ನು ಸಲ್ಲಿಸಿದರು
(ಕ್ರಮ. ಸ.ಕಾ.ಅ (ವಿದ್ಯುತ್) ಬಿ.ಬಿ.ಎಂ.ಪಿ ಶ್ರೀ.ಬಾಬು ರೆಡ್ಡಿ (ಸ.ಅ–9343749635)

6. ವಾರ್ಡ್ ಪರಿಮಿತಿಯಲ್ಲಿ ಪರಿಸರ ಸಂರಕ್ಷಣೆಗಾಗಿ ಮರಗಳನ್ನು ಬೆಳೆಸಬೇಕಾಗಿದ್ದು, ಇದರ ಸಲುವಾಗಿ ಗಿಡಗಳನ್ನು ನೆಟ್ಟಿದ್ದು, ಹಸುಗಳು ಇದನ್ನು ತಿಂದು ನಾಶಮಾಡುತ್ತಿರುವುದನ್ನು ತಡೆಯಲು ಗಿಡಗಳಿಗೆ ಟ್ರೀ ಗಾರ್ಡ್ ಆಳವಡಿಸುವಂತೆ ಸ್ಥಳೀಯರಾದ ಶ್ರೀ. ಆನಂದ ರವರ ಸಭೆಗೆ ಕೋರಿದರು
(ಕ್ರಮ. ವಲಯ ಅರಣ್ಯಾಧಿಕಾರಿಗಳು, ಯಲಹಂಕ)

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಯಿತು, ಹಾಗೂ ತಿಳಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ
ವಾರ್ಡ್ ಕಮಿಟಿ, ವಾರ್ಡ್ ನಂ. 01(ಕೆಂಪೇಗೌಡ)

ನೋಡಲ್ ಅಧಿಕಾರಿಗಳು
ವಾರ್ಡ್ ಕಮಿಟಿ, ವಾರ್ಡ್ ನಂ. 01(ಕೆಂಪೇಗೌಢ)

ಪ್ರತಿಯನ್ನು:
ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಮಾಹಿತಿಗಾಗಿ.
1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಮಾಹಿತಿಗಾಗಿ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಮಾಹಿತಿಗಾಗಿ.
3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರ ಮಾಹಿತಿಗಾಗಿ.
4. ವಲಯ ಅರಣ್ಯಾಧಿಕಾರಿಗಳು ಯಲಹಂಕ ವಲಯರವರ ಮಾಹಿತಿಗಾಗಿ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, (ಬೃ.ನಿ.ಗಾ) ವಿಭಾಗ ರವರ ಮಾಹಿತಿಗಾಗಿ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ರವರ ಸೂಕ್ತ ಕ್ರಮಕ್ಕಾಗಿ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, (ವಿದ್ಯುತ್) ಯಲಹಂಕರವರ ಸೂಕ್ತ ಕ್ರಮಕ್ಕಾಗಿ.